# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 889 (1036) |
| ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 12.03.2026 |
| ಉತ್ತರಿಸುವ ಸಚಿವರು | : | ಸನ್ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಉದ್ದೇಶಗಳೇನು; | ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ದಿನಾಂಕ:22.02.2007 ರಂದು ಸ್ಥಾಪನೆಗೊಂಡು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಪರಿಶಿಷ್ಟ ಪಂಗಡದ ಸಮುದಾಯಗಳ ಆರ್ಥಿಕ ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರವು ಒದಗಿಸುವ ಅನುದಾನದಲ್ಲಿ ವಿವಿಧ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದರ ಮೂಲಕ ಪರಿಶಿಷ್ಟ ಪಂಗಡದ ಸಮುದಾಯದವರು ಆರ್ಥಿಕ ಶ್ರೇಯೋಭಿವೃದ್ಧಿಯನ್ನು ಸಾಧಿಸುವ ಉದ್ದೇಶವನ್ನು ಹೊಂದಿದೆ. |
| ಆ) | ರಾಜ್ಯದಲ್ಲಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ನಿಗಮದ ಪ್ರಾರಂಭದಲ್ಲಿ ಎಷ್ಟು ಜಿಲ್ಲಾ ಕಚೇರಿಗಳಿದ್ದವು ಮತ್ತು ಈವರೆಗೂ ಎಷ್ಟು ಜಿಲ್ಲೆಗಳಲ್ಲಿ ಜಿಲ್ಲಾ ಕಚೇರಿಗಳನ್ನು ಮಂಜೂರು ಮಾಡಲಾಗಿದೆ; (ಮಾಹಿತಿ ಒದಗಿಸುವುದು) | ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಈ ಕೆಳಕಂಡ 16 ಜಿಲ್ಲೆಗಳಲ್ಲಿ ಜಿಲ್ಲಾ ಕಛೇರಿಗಳನ್ನು ತೆರೆದು ಪ್ರಾರಂಭಿಸಲಾಗಿದ್ದು, ಕಾರ್ಯನಿರ್ವಹಿಸುತ್ತಿವೆ. |

| ಕ್ರ. ಸಂ | ಜಿಲ್ಲಾ ಕೇಂದ್ರ | ಕ್ರ. ಸಂ | ಜಿಲ್ಲಾ ಕೇಂದ್ರ |
|---|---|---|---|
| 1 | ಬೆಂಗಳೂರು ನಗರ ಮತ್ತು ಗ್ರಾಮಾಂತರ | 2 | ತುಮಕೂರು |
| 3 | ಚಿತ್ರದುರ್ಗ | 4 | ದಾವಣಗೆರೆ |
| 5 | ಮೈಸೂರು | 6 | ಬೆಳಗಾವಿ |
| 7 | ರಾಯಚೂರು | 8 | ಬಳ್ಳಾರಿ |
| 9 | ಚಿಕ್ಕಬಳ್ಳಾಪುರ | 10 | ಶಿವಮೊಗ್ಗ |
| 11 | ಹಾಸನ | 12 | ಚಾಮರಾಜನಗರ |
| 13 | ಹಾವೇರಿ | 14 | ಧಾರವಾಡ |
| 15 | ಬಾಗಲಕೋಟೆ | 16 | ಕಲಬುರಗಿ |

| | | |
|---|---|---|
| ಇ) | ಜಿಲ್ಲಾ ಕಚೇರಿ ಮತ್ತು ಸಿಬ್ಬಂದಿ ನೀಡಲು ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಮಾನದಂಡವಾಗಿದೆಯೇ; ಹೌದಾದಲ್ಲಿ ಕಲ್ಯಾಣ ಕರ್ನಾಟಕ ಜಿಲ್ಲೆಗಳಾದ ಯಾದಗಿರಿ, ಬೀದರ್, ವಿಜಯನಗರ, ಕೊಪ್ಪಳ, ಹಾಗೂ ಕೋಲಾರ, ಮಂಗಳೂರು ಇನ್ನಿತರ ಜಿಲ್ಲೆಗಳಿಗೆ ಜಿಲ್ಲಾ ಕಚೇರಿ ಮತ್ತು ಸಿಬ್ಬಂದಿಗಳನ್ನು ಒದಗಿಸದೇ ಇರಲು ಕಾರಣವೇನು; (ಮಾಹಿತಿ ಒದಗಿಸುವುದು) | 2011ರ ಜನಗಣತಿಗೆ ಅನುಗುಣವಾಗಿ ಪರಿಶಿಷ್ಟ ಪಂಗಡದ ಜನಸಂಖ್ಯೆ ಹೆಚ್ಚಿರುವ 16 ಜಿಲ್ಲೆಗಳಲ್ಲಿ ಜಿಲ್ಲಾ ಕಛೇರಿಗಳನ್ನು ತೆರೆದು ನಿರ್ವಹಿಸಲಾಗುತ್ತಿದೆ.<br><br>ಯಾದಗಿರಿ ಮತ್ತು ಬೀದರ್ ಜಿಲ್ಲೆಗಳ ಕಛೇರಿಯ ನಿರ್ವಹಣೆಯನ್ನು ಕಲಬುರಗಿ ಜಿಲ್ಲಾ ಕಛೇರಿಯ ಮೂಲಕ, ವಿಜಯನಗರ ಜಿಲ್ಲಾ ಕಛೇರಿಯ ನಿರ್ವಹಣೆಯನ್ನು ಬಳ್ಳಾರಿ ಜಿಲ್ಲಾ ಕಛೇರಿಯ ಮೂಲಕ, ಕೋಲಾರ ಜಿಲ್ಲೆಯ ನಿರ್ವಹಣೆಯನ್ನು ಚಿಕ್ಕಬಳ್ಳಾಪುರ ಜಿಲ್ಲಾ ಕಛೇರಿಯ ಮೂಲಕ ಹಾಗೂ ಕೊಪ್ಪಳ ಜಿಲ್ಲಾ ಕಛೇರಿಯ ನಿರ್ವಹಣೆಯನ್ನು ರಾಯಚೂರು ಜಿಲ್ಲಾ ಕಛೇರಿಯ ಮೂಲಕ ನಿರ್ವಹಣೆ ಮಾಡಲಾಗುತ್ತಿದೆ.<br><br>ಮಂಗಳೂರು ಹಾಗೂ ಇನ್ನಿತರ ಜಿಲ್ಲೆಗಳಲ್ಲಿ ಡಾ\|\| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮುಖಾಂತರ ನಿಗಮದ ಕೆಲಸ ಕಾರ್ಯಗಳನ್ನು ನಿರ್ವಹಣೆ ಮಾಡಲಾಗುತ್ತಿದೆ.<br><br>ಮುಂದುವರೆದು, ಇನ್ನುಳಿದ 14 ಜಿಲ್ಲೆಗಳಲ್ಲಿ ಜಿಲ್ಲಾ ಕಛೇರಿಯನ್ನು ತೆರೆಯಲು ಹಾಗೂ ಅವಶ್ಯವಿರುವ ಹುದ್ದೆಗಳ ಮಂಜೂರಾತಿ ಪ್ರಕ್ರಿಯೆಯು ಪರಿಶೀಲನಾ ಹಂತದಲ್ಲಿರುತ್ತದೆ. |
| ಈ) | ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಕಛೇರಿಗಳನ್ನು ಯಾವಾಗ ಸ್ಥಾಪಿಸಲಾಗುವುದು.? (ಮಾಹಿತಿ ಒದಗಿಸುವುದು) | ಕಲ್ಯಾಣ ಕರ್ನಾಟಕ ಜಿಲ್ಲೆಗಳಾದ ರಾಯಚೂರು, ಬಳ್ಳಾರಿ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಈಗಾಗಲೇ ನಿಗಮದ ಜಿಲ್ಲಾ ಕಛೇರಿಗಳಿದ್ದು, ಇನ್ನುಳಿದಂತೆ, ಯಾದಗಿರಿ, ಬೀದರ್, ವಿಜಯನಗರ, ಕೊಪ್ಪಳ ಜಿಲ್ಲೆಗಳಿಗೆ ಜಿಲ್ಲಾ ಕಛೇರಿ ಹಾಗೂ ಸಿಬ್ಬಂದಿ ಮಂಜೂರಾತಿಗಾಗಿ ಪ್ರಕ್ರಿಯೆ ಪರಿಶೀಲನಾ ಹಂತದಲ್ಲಿರುತ್ತದೆ. |

STW/SECB/STC/66/2026

(ಸಿದ್ದರಾಮಯ್ಯ)
ಮುಖ್ಯಮಂತ್ರಿ